# ಆಹಾ ಸುದ್ದಿ!

★ ಸಸಿತೋಟ




ಅಮೆರಿಕಾದ ಲಾಸ್ ವೇಗಾಸ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಗೃಹೋಪಯೋಗಿ ಎಲೆಕ್ಟ್ರಾನಿಕ್ಸ್ ವಸ್ತುಗಳ ಪ್ರದರ್ಶನದಲ್ಲಿ ಇಡಲಾಗಿರುವ ಇದು ಕೊಲಿಬ್ರಿ ಟೂಥ್‌ಬ್ರಷ್. ಹಲ್ಲುಗಳನ್ನು ಹೇಗೆ ಉಜ್ಜಬೇಕೆಂದು ನಿಮಗೇ ಹೇಳಿಕೊಡುತ್ತದೆಯಂತೆ. ಇದು ಬ್ಲೂಟೂಥ್‌ಗೆ ಸಂಪರ್ಕ ಹೊಂದಿದೆ. ನೀವು ಬ್ರಷ್ ಅನ್ನು ಹೇಗೆ ತಿರುಗಿಸುತ್ತೀರಿ ಎಂಬುದರ ಮೇಲೆ ಅದು ಸರಿ- ತಪ್ಪುಗಳನ್ನು ಪಟ್ಟಿ ಮಾಡಿ ಆ್ಯಂಡ್ರಾಯ್ಡ್ ಫೋನ್‌ಗೆ ಕಳಿಸುತ್ತದೆ. ನಿಮ್ಮ ಹಲ್ಲು, ಬ್ರಷ್ ಕೂಡಾ ನಿಮ್ಮ ನಿಯಂತ್ರಣದಲ್ಲಿಲ್ಲ ಎಂದಾಯ್ತು.

ಕೆಂಟುಕಿಯ ಸೆರೆಮನೆಯಿಂದ ತಪ್ಪಿಸಿಕೊಂಡ ಕೈದಿಯೊಬ್ಬ 24 ಗಂಟೆಗಳೊಳಗೆ ತಾನೇ ಪೊಲೀಸರಿಗೆ ಫೋನ್ ಮಾಡಿ ಪುನಃ ಸೆರೆಮನೆ ಸೇರಿಕೊಂಡಿದ್ದಾನಂತೆ. ಕೈದಿಯ ಮನಃಪರಿವರ್ತನೆ ಮಾಡಿದ್ದು ಚಳಿ. ರಾತ್ರಿಯಿಡೀ ಚಳಿಯಲ್ಲಿ ನಡುಗಿದ ಕೈದಿ ರಾಬರ್ಟ್ ಸೆರೆಮನೆಯೇ ವಾಸಿ ಅಂದುಕೊಂಡಿದ್ದು ಸಹಜ ಬಿಡಿ.



ಚೀನಾದಲ್ಲಿ ಹಿಮ ಸುರಿದರೂ ಈ ಯುವತಿ ಪೋಲ್ ಡಾನ್ಸ್ ತರಬೇತಿ ನಿಲ್ಲಿಸಿಲ್ಲ. ವಿಶ್ವ ಪೋಲ್ ಡಾನ್ಸಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಲೆಂದೇ ತರಾತುರಿಯಲ್ಲಿ ಈ ತರಬೇತಿ ಶುರು ಮಾಡಲಾಗಿದೆಯಂತೆ. ಎಲ್ಲವೂ ತನಗೇ ಬೇಕು ಎನ್ನುವ ಚೀನಾದಲ್ಲಿ ಬೆಕ್ಕಿಗೆ ಆಟ, ಇಲಿಗೆ ಪ್ರಾಣ ಸಂಕಟ ಎನ್ನುವಂತಾಗಿದೆ.



ಟ್ರಯಲ್ ಕೊಠಡಿಯ ಹಂಗಿಲ್ಲದೇ ಮಳಿಗೆಯಲ್ಲೇ ಉಡುಪು ಸರಿ ಹೊಂದುತ್ತದೆಯೋ ಎಂದು ಪರೀಕ್ಷಿಸಿ ಖರೀದಿಸುವ, ಅಲ್ಲಲ್ಲ ಉಚಿತವಾಗಿ ಪಡೆಯುವ ಅವಕಾಶವನ್ನು ಪ್ಯಾರಿಸ್‌ನ ಮಳಿಗೆಯೊಂದರಲ್ಲಿ ಕಲ್ಪಿಸಲಾಗಿತ್ತು. ಮೊದಲು ಬಂದ ನೂರು ಗ್ರಾಹಕರಿಗೆ ಈ ಅವಕಾಶ. ಆದರೆ ಕಂಡೀಷನ್ಸ್ ಅಪ್ಲೈ ಏನೆಂದರೆ ಒಳ ಉಡುಪಿನಲ್ಲೇ ಮಳಿಗೆ ಪ್ರವೇಶಿಸಬೇಕು. ವಿವಸ್ತ್ರರಾಗಿ ಓಡಾಡುವುದಕ್ಕೆ ಹಕ್ಕು ಕೋರಿ ಚಳವಳಿ ನಡೆಯುತ್ತಿರುವಾಗ ಅರ್ಧ ವಸ್ತ್ರ ತೊಡಲೇನಡ್ಡಿ, ಅದೂ ಪುಕ್ಕಟೆ ಕೊಡುತ್ತೇನೆಂದಾಗ ಅಕ್ಕಪಕ್ಕದವರು ನೋಡಿದರೇನಂತೆ!



ಲಂಡನ್ನಿನ ವಿಪ್‌ಸ್ನೇಡ್ ಮೃಗಾಲಯದಲ್ಲಿ ಲೀಮರ್ ಅಬ್ಯಾಕಸ್ ಮುಂದೆ ಪಟ್ಟಾಗಿ ಕುಳಿತಿದೆ. ಕುತೂಹಲಕ್ಕೆ ಆಗಾಗ ಕಾಲುಗಳಿಂದ ಒದೆಯುವ ಅದು ಮೃಗಾಲಯದ ಆಕರ್ಷಣೆ. ಹೆಚ್ಚಿನವು ಆಗುವುದು ಹೀಗೆಯೇ. ಆಕಸ್ಮಿಕವೇ ಅಚ್ಚರಿ ಎನಿಸಿಕೊಂಡುಬಿಡುತ್ತದೆ.

ಪ್ರೇಯಸಿ ಜೊತೆ ಕಣ್ಣಾ ಮುಚ್ಚೇ ಕಾಡೆ ಗೂಡೆ ಆಡುತ್ತಿದ್ದ ಆಸ್ಟ್ರೇಲಿಯ ಯುವಕನೊಬ್ಬ ವಾಷಿಂಗ್ ಮಷೀನ್‌ನಲ್ಲಿ ಅಡಗಿಕೊಂಡು ಪೊಲೀಸರು, ಅರೆ ವೈದ್ಯಕೀಯ ತಂಡದವರು, ಅಗ್ನಿಶಾಮಕ ದಳದವರು, ರಕ್ಷಣಾ ತಂಡದವರ ಎದುರು ಬಹಿರಂಗಗೊಳ್ಳಬೇಕಾಯಿತು, ಅದೂ ಹುಟ್ಟುಡುಗೆಯಲ್ಲಿ. ಟಾಪ್ ಲೋಡಿಂಗ್ ಮಷೀನ್‌ನಲ್ಲಿ ನಗ್ನನಾಗಿ ಅವಿತುಕೊಂಡಿದ್ದ ಆತ ಹೊರಬರಲಾರದೇ ಒದ್ದಾಡಿದಾಗ ಎಲ್ಲರಿಗೂ ಕರೆ ಹೋಗಿ ಕೊನೆಗೆ ಆಲಿವ್ ಎಣ್ಣೆ ಬಳಸಿ ಮೇಲೆ ಎಳೆದರಂತೆ. ಉಡುಪು ತೊಟ್ಟಿದ್ದರೆ ಆಲಿವ್ ಎಣ್ಣೆಯನ್ನೂ ಬಳಸಲು ಸಾಧ್ಯವಾಗುತ್ತಿರಲಿಲ್ಲ. ಹೇಗಿದೆ ಆತನ ಮುಂದಾಲೋಚನೆ!